ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ನಾವು ಹೈಕೋರ್ಟಿಗಾಗಲೀ ಸುಪ್ರೀಂ ಕೋರ್ಟಿಗಾಗಲೀ ಅವರ ಮೇಲೆ ಯಾವ ಆಕ್ಷೇಪಣೆ ಮಾಡುವುದು ಒಳ್ಳೆಯದಲ್ಲ ಎಂದು ನನಗನಿಸುತ್ತದೆ. ಕಾರಣ ನಾವು ಯಾವ ಕಾಲಕ್ಕೆ ಹೈಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲಿ ನಮ್ಮ ವಾದದಮೇಲೆ ಡಿಪೆಂಡ್ ಇರುತ್ತದೆ. ನಾವೇನು ಕೋರ್ಟಿನಲ್ಲಿ ಅಪೀಲು ಮಾಡುವಂಥ ಛಾಲೆಂಜ್ ಏನು ಮಾಡುತ್ತೇವೆ, ಅದರ ಮೇಲೆ ಅವರು ಇಂಟರ್‌ಪ್ರಿಟ್ ಮಾಡುತ್ತಾರೆ. ಅಷ್ಟೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಲ್ಲಿರುವ ನಿಮ್ಮ ವಕೀಲರು ಎನು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ.

5-40 ಪಿ.ಎಂ

ಶ್ರೀ ಕರಿಯಣ್ಣ : ಅಲ್ಪಸಂಖ್ಯಾತರದ್ದು ಆಗುವುದಿಲ್ಲವೆಂದು ತಿರಸ್ಕೃತವಾಗಿದೆ. ಅದಕ್ಕೋಸ್ಕರ, ಸರ್ಕಾರ ರಕ್ಷಣೆಗೆ ಬರಬೇಕೆಂದು ಹೇಳುತ್ತಿದ್ದೇವೆ. ಇವರು ತಮ್ಮ ಸಂಸ್ಥೆಗಳನ್ನು ನಡೆಸುವುದಾದರೂ ಹೇಗೆ? ಬಾಗಿಲು ಮುಚ್ಚಬೇಕೆ? ಸರ್ಕಾರ ಅಂತಹ ಸಂಸ್ಥೆಗಳಿಗೆ ಉತ್ತೇಜನ ಕೊಡುತ್ತೀರಿ ಗ್ರಾಂಟ್ ಕೊಡುತ್ತೀರಿ, ಮೊದಲನೇ ವರ್ಷದಿಂದಲೇ ಕೊಡಬೇಕೆಂದು ಕಾನೂನು ಮಾಡಿದ್ದರೂ ಸಹ ಏಕೆ ಹೀಗೆ ಮಾಡಿದಿರಿ?

ಶ್ರೀ ಬಿ. ಶಿವಣ್ಣ : ಇದು ಸರ್ಕಾರದ ನೀತಿಯ ಪ್ರಶ್ನೆಯಾಗಿದೆ. 1993 ರಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ಸಂದರ್ಭದಲ್ಲಿ ಅವರ ಮುಂದಿದ್ದಂಥ ವಾದದ ಮೇರೆಗೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಇಂತಿಷ್ಟು ಸೀಟುಗಳು, ಉಚಿತ ಸೀಟುಗಳು ಇಷ್ಟು ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ. ಅದರ ಪ್ರಕಾರ ಕೆಲವು ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ವಿನಾಯಿತಿ ಕೊಟ್ಟು ಉಚಿತ ಸೀಟುಗಳನ್ನು ಕೊಡಬೇಕು. ಆದರೆ, ಪರಿಶಿಷ್ಟ ಜಾತಿ : ವರ್ಗಗಳವರಿಗೆ - ಕೊಡುವುದಿಲ್ಲವೆನ್ನುವ ವಾದವನ್ನು ಒಪ್ಪುತ್ತೇನೆ. ಸರ್ಕಾರದ ವತಿಯಿಂದ ತಾವು ಮಾಡಿಸಿಕೊಳ್ಳಬೇಕಾಗಿತ್ತು. ಅಥವಾ ಸರ್ಕಾರ ಈ ಕುರಿತು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಲಿ. ಆದುದರಿಂದ, ತಾವು ಏನು ಹೇಳಿದ್ದೀರಿ, ಈ ವಿಷಯವನ್ನು ಮಂತ್ರಿಮಂಡಲದ ಮುಂದಿಟ್ಟು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ, ಚರ್ಚೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ಕೈಕೊಳ್ಳಲು ಪ್ರಯತ್ನಿಸುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಲಕ್ಷಣಯ್ಯ : ಸದರಿ ವಿಷಯವನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚಿಸುವುದಾಗಿ ಮಾನ್ಯ ಸಚಿವರು ಹೇಳಿದರು, ತುಂಬಾ ಸಂತೋಷ. ಆದರೆ, ಅಲ್ಪಸಂಖ್ಯಾತ ಸಂಸ್ಥೆಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಏನು ತೀರ್ಪು ನೀಡಿದೆ ಅದರ ಬಗ್ಗೆ ನಾನು ಟೀಕೆ ಮಾಡುವುದಿಲ್ಲ. ಸರ್ವೋಚ್ಚ ನ್ಯಾಯಾಲಯದಲ್ಲಿರುವ ನಮ್ಮ ರಾಜ್ಯದ ವಕೀಲರು ಈ ಪ್ರಕರಣವನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ತಾವು ಒತ್ತಾಯ ಹಾಕಬೇಕಾಗುತ್ತದೆ. ಎರಡನೆಯದಾಗಿ, ಇದು ರಾಜ್ಯ ಸರ್ಕಾರದ ನೀತಿಯ ವಿಷಯವೆಂದು ಹೇಳಿದಿರಿ. ಈ ನೀತಿಯನ್ನು ಮಾಡುವವರು ಯಾರು? ಶೇಕಡ 50 ರಷ್ಟು ಸೌಲಭ್ಯವನ್ನು ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಏನು ಕೊಟ್ಟಿದ್ದೀರಿ, ಇದೆ ಸೌಲಭ್ಯವನ್ನು ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡಿಸುವುದಕ್ಕೂ ಸಹ ತಾವು ಪ್ರಯತ್ನಿಸಬೇಕೆಂದು ತಮಗೆ ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶಿವಣ್ಣ : ಈ ಸಲಹೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ.

ವಿತ್ತೀಯ ಕಾರ್ಯ ಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ.

ಉಪಾಧ್ಯಕ್ಷರು : ಈಗ ಬೇಡಿಕೆಗಳ ಪ್ರಸ್ತಾವಗಳನ್ನು ಮಂಡಿಸುವುದು.

ಬೇಡಿಕೆ ಸಂಖ್ಯೆ: 36 - ಭಾರಿ ಮತ್ತು ಮಧ್ಯಮ ನೀರಾವರಿ

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) (ಉಪ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ,''ರಾಜ್ಯಪಾಲರ ಶಿಫಾರಿಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, ' ಭಾರಿ ಮತ್ತು ಮಧ್ಯಮ ನೀರಾವರಿ ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 330,05,83,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1052,81,28,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 50 - ವಿದ್ಯುಚ್ಛಕ್ತಿ ಯೋಜನೆಗಳು

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೆ, ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಿದ್ಯುಚ್ಛಕ್ತಿ ಯೋಜನೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 101,92,94,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 425,15,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 14 - ಯುವಜನ ಸೇವೆ

ಶ್ರೀ ವಸಂತ. ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಯುವಜನ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,08,99,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 30 - ಪ್ರವಾಸೋದ್ಯಮ

ಶ್ರೀ ವಸಂತ. ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗು 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪ್ರವಾಸೋದ್ಯಮ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,50,57,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂಪಾಯಿಗಳಿಗೆ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ : 29 ವಾರ್ತಾ ಮತ್ತು ಪ್ರಚಾರ

ಶ್ರೀ ಆರ್.ಎನ್. ನಾಯಕ್ (ವಾರ್ತಾ, ಕನ್ನಡ ಮತ್ತು ಸಂಸ್ಕೃತಿ ಸಚಿವರು): ಮಾನ್ಯ ಉಪಾಧ್ಯಕ್ಷರೆ ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1995 ರಂದು

ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,88,71,000 ರೂಪಾಯಿಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,000 ರೂಪಾಯಿಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆ ಸಂಖ್ಯೆ: 15, ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ಇಲಾಖೆ

ಶ್ರೀ ಆರ್.ಎನ್. ನಾಯಕ್ (ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ ರಾಜ್ಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,94,47,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 55 (ಸಹಕಾರಿ ಇಲಾಖೆ)

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರಿ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಸಹಕಾರ'ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 43,64,35,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,69,72,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 26 (ಸಾರಿಗೆ ಇಲಾಖೆ)

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ('ಸಾರಿಗೆ ಸೇವೆ'ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,70,71,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 8 (ರೇಷ್ಮೆ ಇಲಾಖೆ)

ಶ್ರೀ ಎಸ್.ಎಂ. ಕೃಷ್ಣ (ರೇಷ್ಮೆ ಸಚಿವರ ಪರವಾಗಿ) : ಸನ್ಮಾನ್ಯ ಉಪಾಧ್ಯಕ್ಷರೆ "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ 'ರೇಷ್ಮೆ ವ್ಯವಸಾಯಕ್ಕೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 116,57,37,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11;12,50,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರಿಕೊಳ್ಳುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಶಾಸನ ರಚನಾಕಾರ್ಯಕಲಾಪಗಳು

1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್.ಎನ್. ನಾಯಕ್ (ಕಲೆ, ಸಂಸ್ಕೃತಿ ಕನ್ನಡಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "1994ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

SRI B.I. PATIL : Sir, I Want to move an amendment to this Bill.

(INTERRUPTIONS)

Sir, I strongly oppose the Kannada Development Authority Bill in the interest of the minority people.....

SRI K.C. MODEGEKAR DESAI :Sir,.....

ಉಪಾಧ್ಯಕ್ಷರು : ನೀವು ಮಾತನಾಡಬೇಕೆಂದರೆ ನಿಮ್ಮ ಹೆಸರನ್ನು ತಿಳಿಸಬೇಕಾಗುತ್ತದೆ.

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಅವರು ಕನ್ನಡದಲ್ಲಿ ಮಾತನಾಡಬೇಕು. ಅದನ್ನು ತಳ್ಳಿ ಹಾಕಿ.

(Interruptions)

SRI B.I. PATIL : Uchagaon Sir, we oppose this bill and we will walk out. This bill should not be implemented in border areas like Belgaum where majority of Manathi speaking people are living. There are guidelines of the Govt. of India that all the circulars, Notifications, orders & other publications of the Govt and Semi Govt, should be in the respective language in such....

ಶ್ರೀ ವಾಟಾಳ್ ನಾಗರಾಜ್ : ನೀವು ಅವರಿಗೆ ಅವಕಾಶ ಕೊಟ್ಟಿದ್ದೀರಾ?

(ಗೊಂದಲ)

ಉಪಾಧ್ಯಕ್ಷರು : ಅವಕಾಶ ಕೊಟ್ಟಿದ್ದೇನೆ. ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಅವರ ಹೆಸರನ್ನು ಕೊಟ್ಟಿದ್ದಾರೆ. ಅವರಿಗೆ ಅನುಮತಿಯನ್ನು ಕೊಟ್ಟಿದ್ದೇನೆ.

SRI B.I. PATIL :This bill is against the interest of the minority people We will oppose this Bill & walk out

(ಶ್ರೀ ಬಿ.ಐ. ಪಾಟೀಲ್ ಅವರು ಸಭಾತ್ಯಾಗ ಮಾಡಿದರು)